# ಕರ್ನಾಟಕ ಚಿತ್ರಕಲಾ ಪರಿಷತ್

ಕುಮಾರಕೃಪ ರಸ್ತೆ, ಬೆಂಗಳೂರು – 560001

ದೂ : +91 99019 35906 / Email: ckpchitrasanthe@gmail.com

ಪಾಸ್‌ಪೋರ್ಟ್ ಸೈಜಿನ ಫೋಟೋ

19 ನೇ

ಚಿತ್ರ ಸಂತೆ

CHITRA SANTHE

ಪಾವತಿಗಾಗಿ ಕ್ಯೂಆರ್ ಕೋಡ್

ಹೆಸರು

ಹುಟ್ಟಿದ ದಿನಾಂಕ ವಯಸ್ಸು ವಿದ್ಯಾರ್ಹತೆ

ವಿಳಾಸ

ಮೊ.ನಂ.

ಈಮೇಲ್ ಜಿಎಸ್‌ಟಿ ನಂ.

ಭಾಗವಹಿಸುವ ಕಲಾವಿದರು ಜಿಎಸ್‌ಟಿ ಇಲ್ಲದಿದ್ದರೆ ದೃಢೀಕೃತ ಮಾಹಿತಿಯನ್ನು ನೀಡಬೇಕಾಗುತ್ತದೆ.

ಕಲಾವಿದರಿಗೆ ರೂ. 500/– (ಜಿಎಸ್‌ಟಿ ಸಹಿತ) ಕಲಾಸಂಸ್ಥೆ, ಕಲಾ ಕಾಲೇಜು, ಸಂಸ್ಥೆಗಳಿಗೆ ರೂ. 1000/– (ಜಿಎಸ್‌ಟಿ ಸಹಿತ) ಅನಿವಾಸಿ ಭಾರತೀಯರು / ವಿದೇಶಿ ಕಲಾವಿದರುಗಳಿಗೆ ರೂ. 1500/– (ಜಿಎಸ್‌ಟಿ ಸಹಿತ) ಶುಲ್ಕವನ್ನು ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು ಇವರಿಗೆ ಈ ಕೆಳಕಂಡ ಯಾವುದಾದರೂ ಒಂದು ರೀತಿಯಲ್ಲಿ ಸಂದಾಯ ಮಾಡಬಹುದು.

ಬ್ಯಾಂಕಿನ ಹೆಸರು

ಡಿ.ಡಿ. ಸಂಖ್ಯೆ

ಆನ್‌ಲೈನ್ ವಹಿವಾಟು ವಿವರ

ದಿನಾಂಕ

ಚಿತ್ರಕಲೆ, ಶಿಲ್ಪಕಲೆ, ಸೆರಾಮಿಕ್, ಗ್ರಾಫಿಕ್ ಹಾಗೂ ಮಿಶ್ರಮಾಧ್ಯಮ ವಿಭಾಗಗಳಲ್ಲಿ ಭಾಗವಹಿಸಬಹುದಾಗಿದೆ.

ಕೆಳಗೆ ಸೂಚಿಸಿರುವ ನಿಮಗೆ ಅನ್ವಯಿಸುವ ಒಂದನ್ನು ಗುರುತು ಮಾಡಿ

ವೃತ್ತಿಪರ ಕಲಾವಿದರು ☐ ಸಾಂಪ್ರದಾಯಿಕ ಕಲಾವಿದರು ☐ ಹಿರಿಯ ನಾಗರಿಕರು ☐

ಕಲಾ ಸಂಸ್ಥೆಗಳು ☐ ವಿದೇಶಿ ಕಲಾವಿದರು ☐ ಹವ್ಯಾಸಿ ಕಲಾವಿದರು ☐

ವಿದ್ಯಾರ್ಥಿಗಳು ☐ ವಿಕಲಚೇತನ / ದಿವ್ಯಾಂಗ ಕಲಾವಿದರು ☐

ಚಿತ್ರಸಂತೆಯಲ್ಲಿ ಭಾಗವಹಿಸಲು ಎಲ್ಲಾ ನಿಯಮ ನಿಬಂಧನೆಗಳನ್ನು ನಾನು ಒಪ್ಪಿರುತ್ತೇನೆ

ಸಹಿ/–

ಮಾನ್ಯರೇ,

**ಕೆಳಗೆ ತಿಳಿಸಿರುವ ವಿಷಯಗಳಿಗೆ ಸೂಕ್ತವಾಗಿ ವಿವರ ನೀಡಿ**

ವಿಷಯ : ದೃಢೀಕೃತ ಜಿಎಸ್‌ಟಿ ಸಂಖ್ಯೆ / ದೃಢೀಕರಣ

1. ನಮೂದಾದ ಜಿಎಸ್‌ಟಿ ಸಂಖ್ಯೆ

ಅಥವಾ

2. ಸಂಸ್ಥೆಯ ತಾತ್ಕಾಲಿಕ / ಸಾಂದರ್ಭಿಕ ಜಿಎಸ್‌ಟಿ ನೋಂದಣಿ ಸಂಖ್ಯೆ

ಅಥವಾ

3 ನಾವು / ನಮ್ಮ ಸಂಸ್ಥೆಯು ಕಂಪನಿಯು ಸೆಕ್ಷನ್ 22 ರ ಅಡಿಯಲ್ಲಿ ಅಥವಾ 2017ರ ಜಿಎಸ್ ಟಿ ಕಾಯಿದೆಯ ಸೆಕ್ಷನ್ 24 ನೋಂದಾಯಿಸುವ ಅವಶ್ಯಕತೆ ಇಲ್ಲವೆಂದು ಈ ಮೂಲಕ ಘೋಷಿಸುತ್ತೇವೆ.
ನಾನು/ನಾವು ಈ ಮೂಲಕ, ಮೇಲಿನ ಮಾಹಿತಿಯು ಸತ್ಯ ಮತ್ತು ಸರಿ ಎಂದು ದೃಢೀಕರಿಸುತ್ತೇವೆ.

ಸಹಿ/–

| | |
|---|---|
| ಹೆಸರು | |
| ವಿಳಾಸ | |
| | |
| ದೂರವಾಣಿ | |
| ಸ್ಥಳ | ದಿನಾಂಕ |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಸಹಾಯವಾಣಿ ಸಂ +91 99019 35906

ಸಮಯ (ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10.30 ರಿಂದ ಸಂಜೆ 5.00)

# ಕರ್ನಾಟಕ ಚಿತ್ರಕಲಾ ಪರಿಷತ್

# ಚಿತ್ರ ಸಂತೆ-19

## ಭಾನುವಾರ, 2ನೇ ಜನವರಿ, 2022

ಕರ್ನಾಟಕ ಚಿತ್ರಕಲಾ ಪರಿಷತ್-ಕಲೆ ಮತ್ತು ಸಂಸ್ಕೃತಿಯ ಸೇವೆಯಲ್ಲಿ 61 ವಸಂತಗಳು.

**75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ 19ನೇ ಚಿತ್ರಸಂತೆಯನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ಸಮರ್ಪಿಸಲಾಗಿದೆ**

ಕರ್ನಾಟಕ ಚಿತ್ರಕಲಾ ಪರಿಷತ್ತಿನ ವಜ್ರಮಹೋತ್ಸವದ ಅಂಗವಾಗಿ ಹಲವಾರು ಕಲಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ವರ್ಷದಲ್ಲಿನ ಸಾಂಕ್ರಾಮಿಕ ಪಿಡುಗು-ಕೋವಿಡ್-19ರಿಂದಾಗಿ, ಚಿತ್ರ ಸಂತೆಯಲ್ಲಿ ಅತ್ಯಧಿಕ ಕಲಾಸಕ್ತರು ಮತ್ತು ಕಲಾವಿದರು ಒಂದಡೆ ಸೇರಲು ಸಾಧ್ಯವಾಗುವುದಿಲ್ಲ. ಕಲಾವಿದರ ಮತ್ತು ಕಲಾಸಕ್ತ ಸಾರ್ವಜನಿಕರ ಸುರಕ್ಷತೆಯ ಹಿತದೃಷ್ಟಿಯಿಂದ 19ನೆಯ ಚಿತ್ರಸಂತೆಯನ್ನು ಆನ್‌ಲೈನ್‌ನಲ್ಲಿ ಒಂದು ತಿಂಗಳಕಾಲ ಪ್ರದರ್ಶಿಸಲಾಗುತ್ತದೆ. ಚಿತ್ರಸಂತೆಯನ್ನು ಏರ್ಪಡಿಸಲು ಪ್ರತ್ಯೇಕ ಜಾಲತಾಣವನ್ನು ರೂಪಿಸಲಾಗಿದೆ. ಜಾಲತಾಣದಲ್ಲಿ ಚಿತ್ರಸಂತೆಯನ್ನು ಆಯೋಜಿಸಿ ಪ್ರದರ್ಶಿಸಲಾಗುವುದು.

19ನೆಯ ಚಿತ್ರಸಂತೆಯು ಭಾನುವಾರ, 2ನೇ ಜನವರಿ 2022ರಂದು ಉದ್ಘಾಟನೆಗೊಳ್ಳಲಿದೆ. ಈ ನಿಮಿತ್ತ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಎಲ್ಲ ಕಾರ್ಯಕ್ರಮಗಳನ್ನು ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್ ಮತ್ತು chitrasanthe.art ಜಾಲತಾಣದಲ್ಲಿ ವೀಕ್ಷಿಸಬಹುದು.

*ಚಿತ್ರ ಸಂತೆ ಆನ್‌ಲೈನ್-19ನೇ ಆವೃತ್ತಿಯಲ್ಲಿ ಭಾಗವಹಿಸಲು ಈ ಕೆಳಗಿನ ನಿಬಂಧನೆಗಳನ್ನು ಗಮನವಿಟ್ಟು ಓದಿ.

- ಕರ್ನಾಟಕ ಚಿತ್ರಕಲಾ ಪರಿಷತ್ತು ರಾಜ್ಯದ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಲಾವಿದರ ಅನುಕೂಲಕ್ಕಾಗಿ ಚಿತ್ರ ಸಂತೆಯನ್ನು ಆನ್‌ಲೈನ್‌ನಲ್ಲಿ ಆಯೋಜಿಸುತ್ತಿದ್ದು, ಇದು ಅಂತರರಾಷ್ಟ್ರೀಯ ಕಾರ್ಯಕ್ರಮವಾಗಲಿದೆ.
- ಅರ್ಜಿಯನ್ನು www.chitrasanthe.artನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬಹುದು. ಅಥವಾ ನಿಗದಿತ ಅರ್ಜಿಯನ್ನು ಡೌನ್‌ಲೋಡ್ ಮಾಡಿ ckpchitrasanthe@gmail.comಗೆ ಸಲ್ಲಿಸಬಹುದು.
- ಪ್ರತಿಯೊಬ್ಬ ಕಲಾವಿದರು ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಬಹುದು
- ನೋಂದಣಿ ಶುಲ್ಕ: ಕಲಾವಿದರಿಗೆ ರೂಪಾಯಿ: 500/- (ಜಿಎಸ್‌ಟಿ ಸೇರಿದಂತೆ) ಕಲಾ ಸಂಸ್ಥೆಗಳು: ರೂಪಾಯಿ:1000/_ (ಜಿಎಸ್‌ಟಿ ಸೇರಿದಂತೆ) ವಿದೇಶಿ ಕಲಾವಿದರಿಗೆ ರೂಪಾಯಿಗಳು-1500/- ಮಾತ್ರ.
- ನೋಂದಣಿ ಶುಲ್ಕವನ್ನು www.chitrasanthe.art ಮೂಲಕ ಲಭ್ಯವಿರುವ ಯುಪಿಐ/ ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ಪಾವತಿಸಬಹುದು. ಅಥವಾತಿ ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು ಇವರ ಹೆಸರಿನಲ್ಲಿ ಡಿಡಿ. ಪಡೆದು ಕುಮಾರಕೃಪ ರಸ್ತೆಯಲ್ಲಿರುವ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ.
- ಶುಲ್ಕಪಾವತಿಯ ಮಾಹಿತಿಯನ್ನು ಅರ್ಜಿಯ ನಿಗದಿತ ಸ್ಥಳದಲ್ಲಿ ನಮೂದಿಸಬೇಕು. ಪಾವತಿ ದೃಢೀಕರಣದ ನಂತರವೇ ಅರ್ಜಿಯನ್ನು ಪರಿಗಣಿಸಲಾಗುವುದು.
- ನೋಂದಣಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ
- ಕಲಾವಿದರು ತಾವೇ ರ್‌ಚಿಸಿರುವ ಸ್ವಂತ ಕಲಾಕೃತಿಗಳನ್ನು ಮಾತ್ರ ಕಳುಹಿಸಬೇಕು, ನಕಲು ಅಥವಾ ಇತರ ಕಲಾವಿದರ ಕೃತಿಗಳನ್ನು ಸಲ್ಲಿಸಿರುವುದು ಕಂಡುಬಂದರೆ ಅಂತಹ ಅರ್ಜಿಗಳನ್ನು ಅನರ್ಹಗೊಳಿಸಲಾಗುವುದು.
- ಚಿತ್ರಕಲೆ, ಶಿಲ್ಪಕಲೆ, ಸೆರಾಮಿಕ್, ಗ್ರಾಫಿಕ್ ಹಾಗೂ ಮಿಶ್ರಮಾಧ್ಯಮ ವಿಭಾಗಗಳಲ್ಲಿ ಭಾಗವಹಿಸಬಹುದಾಗಿದೆ.
- ಅರ್ಜಿಯ ಜೊತೆಗೆ ಅಟ್ಯಾಚ್ಮೆಂಟ್‌ನಲ್ಲಿ ಕಲಾಕೃತಿಗಳ ಡಿಜಿಟಲ್ ಚಿತ್ರ ಮತ್ತು ದಾಖಲೆಗಳನ್ನು ಸಲ್ಲಿಸಬೇಕು.
- ನೈಸರ್ಗಿಕ ವಿಕೋಪ, ಪ್ರತಿಕೂಲ ಹವಾಮಾನ, ಪ್ರವಾಹ, ಭೂಕಂಪ, ಸ್ಫೋಟ, ಮುಷ್ಕರ, ಕೆಲಸದ ನಿಲುಗಡೆ, ನಿಧಾನಗತಿ, ಕೈಗಾರಿಕಾ ವಿವಾದ, ಅಪಘಾತಗಳು, ಗಲಭೆ, ನಾಗರಿಕ ಕಲಹ, ಸರಕಾರಗಳ ನಿರ್ಬಂಧ, ನಿರ್ವಹಣೆ ಕೊರತೆ, ಪೂರೈಕೆದಾರರ ವಿಳಂಬ ಹಾಗೂ ಇನ್ನಿತರ ಕಾರಣಗಳಿಂದ ಕಾರ್ಯಕ್ರಮ ರದ್ದಾದರೆ ಚಿತ್ರಕಲಾ ಪರಿಷತ್ ಜವಾಬ್ದಾರರಲ್ಲ.
- ಚಿತ್ರಸಂತೆಯ ಕುರಿತು ಅಥವಾ ಕರ್ನಾಟಕ ಚಿತ್ರಕಲಾ ಪರಿಷತ್ತಿನ ವಿರುದ್ಧ ನ್ಯಾಯಾಲಯದಲ್ಲಿ ಯಾವುದೇ ಮೊಕದ್ದಮೆ ಹೂಡುವುದಾಗಲೀ ಅಥವಾ ಯಾವುದೇ ಸಾಮಾಜಿಕ ಜಾಲತಾಣದಲ್ಲಿ ವಿರೋಧ ವ್ಯಕ್ತಪಡಿಸುವುದಿಲ್ಲವೆಂದು ನೋಂದಾಯಿತ ಪತ್ರದಲ್ಲಿ ಸಹಿ ಮಾಡಿದ ಕಲಾವಿದರು/ ಕಲಾಸಂಸ್ಥೆಯವರು ಪ್ರಾಮಾಣೀಕರಿಸುತ್ತೇವೆ ಎಂದು ಒಪ್ಪಿ ಸಹಿ ಮಾಡಿರುತ್ತಾರೆ.
- 18 ವರ್ಷ ಮೇಲ್ಪಟ್ಟ ಎಲ್ಲಾ ಕಲಾವಿದರು ಈ ಚಿತ್ರಸಂತೆಯಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.
- ಚಿತ್ರ ಸಂತೆ ಪ್ರದರ್ಶನಕ್ಕೆ ಆಯ್ಕೆಯಾದ ಕಲಾವಿದರ ಅಂತಿಮ ಪಟ್ಟಿಯನ್ನು ವೆಬ್‌ಸೈಟ್ www.chitrasanthe.art ಮೂಲಕ ಡಿಸೆಂಬರ್ 2021ನಲ್ಲಿ ಪ್ರಕಟಿಸಲಾಗುವುದು.
- ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ತಿರಸ್ಕೃತವಾದ ಕಲಾವಿದರ ಅರ್ಜಿಯ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

**ಮಾರ್ಗಸೂಚಿಗಳು**

- ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ಹಾಗೂ ಕಲಾಕೃತಿಗಳ ವಿವರಗಳನ್ನು Word ಅಥವಾ PDFನಲ್ಲಿ (200 ಪದಗಳನ್ನು ಮೀರದಂತೆ) ಸಲ್ಲಿಸಬೇಕು.
- ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಈಮೇಲ್ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕು.
- ಕಲಾವಿದರ ಪಾಸ್‌ಪೋರ್ಟ್ ಸೈಜಿನ ಭಾವ ಚಿತ್ರವನ್ನು ಲಗತ್ತಿಸಬೇಕು.

- ಒಬ್ಬ ಕಲಾವಿದರು 10 ಕ್ಕಿಂತ ಹೆಚ್ಚು ಕಲಾಕೃತಿಗಳನ್ನು ಸಲ್ಲಿಸುವಂತಿಲ್ಲ
- ದೃಶ್ಯಕಲಾ ಸಂಸ್ಥೆಗಳು 16 ಕಲಾಕೃತಿಗಳಿಗಿಂತ ಹೆಚ್ಚಾಗಿ ಕಳುಹಿಸುವಂತಿಲ್ಲ. ಸಂಸ್ಥೆಯ ಅಧಿಕೃತ ಪತ್ರದ ಜೊತೆಗೆ ಈಮೇಲ್ ಮೂಲಕವೇ ಕಳುಹಿಸತಕ್ಕದ್ದು.
- ಪ್ರತಿಯೊಂದು ಕಲಾಕೃತಿಗಳ ಡಿಜಿಟಲ್ ಚಿತ್ರವು 1 ಎಂ.ಬಿ. (ಮೆಗಾಬೈಟ್)ಗಿಂತ ಹೆಚ್ಚಿರಬಾರದು.

**ಕಲಾಕೃತಿಗಳ ಮಾರಾಟ**

- ಕರ್ನಾಟಕ ಚಿತ್ರಕಲಾ ಪರಿಷತ್ ಕಲಾಕೃತಿಗಳನ್ನು ಚಿತ್ರ ಸಂತೆಯ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರದರ್ಶನ ಆಯೋಜಿಸುತ್ತದೆ.
- ಕಲಾವಿದರು ತಮ್ಮ ಕಲಾಕೃತಿಗಳನ್ನು ನೇರವಾಗಿ ಮಾರಟ ಮಾಡಬಹುದಾಗಿದೆ. ಚಿತ್ರಕಲಾ ಪರಿಷತ್ತು ಯಾವುದೇ ಕಾರಣಕ್ಕೆ ಮಧ್ಯವರ್ತಿಯಲ್ಲ. ಮತ್ತು ಮಾರಟದಲ್ಲಿ ಭಾಗಿಯಾಗುವುದಿಲ್ಲ.
- ಆನ್‌ಲೈನ್‌ನಲ್ಲಿ ಪ್ರದರ್ಶಿಸಲಾದ ಕಲಾಕೃತಿಯು ಮಾರಟವಾದ ನಂತರ, ಯಾವುದೇ ಕಾರಣಕ್ಕೂ ಬೇರೆ ಕಲಾಕೃತಿಯನ್ನು ಪ್ರದರ್ಶಿಸಲಾಗುವುದಿಲ್ಲ.
- ಕಲಾಕೃತಿಗಳ ಕೃತಿ ಸ್ವಾಮ್ಯ ಮತ್ತು ಹಕ್ಕುಗಳನ್ನು ಕಲಾವಿದರೇ ಹೊಂದಿರುತ್ತಾರೆ.

**ಪ್ರದರ್ಶನದ ತಾಂತ್ರಿಕ ವಿವರಗಳು**

- ಕಲಾಕೃತಿಗಳ ಚಿತ್ರವನ್ನು ಜೆಪೆಗ್ (JPEG) ಪ್ರಕಾರದಲ್ಲಿ ತಲುಪಿಸಬೇಕಾಗಿರುತ್ತದೆ.
- ಚಿತ್ರ ಸಂತೆಯಲ್ಲಿ ನೀಡುತ್ತಿದ್ದ ಸ್ಟಾಲ್ ಸಂಖ್ಯೆ ಮಾದರಿಯಲ್ಲೇ ಪ್ರತಿಯೊಬ್ಬ ಕಲಾವಿದರಿಗೆ ಕ್ರಮ ಸಂಖ್ಯೆ ನೀಡಲಾಗುವುದು.
- ಆನ್‌ಲೈನ್ ಪ್ರದರ್ಶನದಲ್ಲಿ ಕಲಾವಿದರ ಹೆಸರು, ಸಂಕ್ಷಿಪ್ತ ಪರಿಚಯ, ಶೀರ್ಷಿಕೆ, ದೂರವಾಣಿ ಸಂಖ್ಯೆ, ವಿಳಾಸದ ಮಾಹಿತಿಯನ್ನು ನೀಡಲಾಗುವುದು.
- ಕಲಾವಿದರು ಸಲ್ಲಿಸಿದ ಕಲಾಕೃತಿಗಳಲ್ಲಿ ಮೊದಲನೇ ಕ್ರಮಸಂಖ್ಯೆಯ ಚಿತ್ರವು ವೆಬ್‌ಸೈಟ್‌ನ ಮುಖಪುಟವಾಗಿ ಪ್ರದರ್ಶಿಸಲಾಗುವುದು. ಇನ್ನುಳಿದ ಕಲಾಕೃತಿಗಳು ಅದೇ ಪುಟದಲ್ಲಿ ಅಡಕವಾಗಿರುತ್ತವೆ.
- ಡಿ.ಡಿ. ಅಥವಾ ಆನ್‌ಲೈನ್‌ನಲ್ಲಿ ಪಾವತಿಸಿದ ಶುಲ್ಕದ ರಶೀದಿಯನ್ನು ಸಲ್ಲಿಸಬೇಕು.

**ಚಿತ್ರ ಸಂತೆ – 19ರ ಕಲಾವಿದರ ಕಲಾ ವಿಭಾಗಗಳು**

- ವೃತ್ತಿಪರ ಕಲಾವಿದರು
- ಸಾಂಪ್ರದಾಯಿಕ ಕಲಾವಿದರು
- ಹಿರಿಯ ನಾಗರಿಕ ಕಲಾವಿದರು
- ಕಲಾಸಂಸ್ಥೆಗಳು
- ವಿದೇಶಿ ಕಲಾವಿದರು
- ಹವ್ಯಾಸಿ ಕಲಾವಿದರು
- ವಿದ್ಯಾರ್ಥಿಗಳು
- ವಿಕಲಚೇತನರು / ದಿವ್ಯಾಂಗ ಕಲಾವಿದರು*

*ವಿಕಲಚೇತನ ಕಲಾವಿದರು ಸರ್ಕಾರಿ ಪ್ರಮಾಣಪತ್ರವನ್ನು ಹೊಂದಿದ್ದರೆ, ನೋಂದಾವಣೆ ಶುಲ್ಕ ಇರುವುದಿಲ್ಲ. ಪ್ರಮಾಣಪತ್ರವನ್ನು, ಕಲಾಕೃತಿಗಳ ಜೊತೆ ಎಲ್ಲಾ ದಾಖಲೆಗಳನ್ನು ckpchitrasanthe@gmail.com ಈಮೇಲ್ ಮೂಲಕ ತಲುಪಿಸಬೇಕು.

## ದೃಢೀಕರಣ ಪತ್ರ

ನಾನು ನಿವಾಸಿ.
19ನೆಯ ಚಿತ್ರ ಸಂತೆಯಲ್ಲಿ ಭಾಗವಹಿಸಿ ನನ್ನ ಕಲಾಕೃತಿಗಳನ್ನು ಆನ್‌ಲೈನ್‌ನಲ್ಲಿ ಪ್ರದರ್ಶಿಸಲು ಒಪ್ಪಿರುತ್ತೇನೆ. ಎಲ್ಲಾ ಕಲಾಕೃತಿಗಳನ್ನು ನನ್ನ ಸ್ವಂತ ಶ್ರಮದಿಂದ ರಚಿಸಿದ್ದೇನೆ. ನನ್ನ ಕಲಾಕೃತಿಯು ಬೇರೆ ಯಾವುದೇ ಕಲಾವಿದರ ಕಲಾಕೃತಿಗಳ ನಕಲು ಆಗಿಲ್ಲವೆಂದು ದೃಢೀಕರಿಸುತ್ತೇನೆ. 19ನೆಯ ಚಿತ್ರಸಂತೆಯ ಎಲ್ಲಾ ನಿಬಂಧನೆಗಳನ್ನು ಓದಿ ಪ್ರದರ್ಶನದಲ್ಲಿ ಭಾಗವಹಿಸಲು ಒಪ್ಪಿರುತ್ತೇನೆ.

## ವಿಶೇಷ ಸೂಚನೆ :

ಈ ನೋಂದಣಿ ಪತ್ರವು ಚಿತ್ರಸಂತೆ 19ರ ಆನ್‌ಲೈನ್ ಪ್ರದರ್ಶನದ್ದಾಗಿದ್ದು, ಕರೋನಾ ಪಿಡುಗು ನಿವಾರಣೆಯಾಗಿ ಕರ್ನಾಟಕ ಸರಕಾರದ ಪರವಾನಗಿ ದೊರೆತರೆ ಹಾಗೂ ಅಂದಿನ ಸ್ಥಿತಿಗತಿಗಳ ಅನುಸಾರ ನೇರ ಚಿತ್ರಸಂತೆಯನ್ನು, 2022ರ ಜನವರಿಯಲ್ಲಿ, ಕುಮಾರಕೃಪಾ ರಸ್ತೆಯಲ್ಲಿ ಹಿಂದಿನಂತೆ ಆಯೋಜಿಸುವ ವಿಷಯವೂ ಮುಕ್ತವಾಗಿದೆ.

ನೀವು ಈ ಆನ್‌ಲೈನ್ ಚಿತ್ರಸಂತೆಯ ಜೊತೆಗೆ ನೇರ ಚಿತ್ರಸಂತೆಯಲ್ಲಿಯೂ ಪಾಲ್ಗೊಳ್ಳಲು ಇಚ್ಛಿಸುವುದಾದರೆ, ಈ ಕೆಳಗೆ ನಮೂದಿಸಿರುವ ಚೌಕದಲ್ಲಿ ✓ ಗುರುತು ಹಾಕಿ. ನೇರಸಂತೆಯ ಪ್ರದರ್ಶನದಲ್ಲಿ ಭಾಗವಹಿಸಲು ಇದೇ ನೋಂದಣಿ ಪತ್ರವು ಅನ್ವಯವಾಗುತ್ತದೆ.

ನೇರ ಸಂತೆ ☐

ಸಹಿ/-